

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಕೋಟಿವಿದ್ಯೆಗಿಂತ ಮೇಟಿವಿದ್ಯೆ ಮೇಲಾಗಿದೆಯೇ?

'**ಕೋ**ಟಿವಿದ್ಯೆಗಿಂತ ಮೇಟಿವಿದ್ಯೆಯೇ ಮೇಲು' ಎಂದು ಸರ್ವಜ್ಞ ಹೇಳುತ್ತಾನೆ. ಆದರೆ ಇಂದು ಮೇಟಿವಿದ್ಯೆಗಿಂತ ಐಟಿಬಿಟಿವಿದ್ಯೆಯೇ ಮೇಲಾಗಿದೆ. ಮೇಟಿವಿದ್ಯೆಯನ್ನು ಬಲ್ಲಂತಹ ಯಾವ ರೈತನೂ ಇಂದು ತನ್ನ ವೃತ್ತಿಯಲ್ಲಿ ಸುಖವನ್ನು ಕಾಣಲು ಆಗುತ್ತಿಲ್ಲ. ಮೊನ್ನೆ ತಾನೆ ಸಿರಿಗೆರೆಯಲ್ಲಿ ನಡೆದ ಒಂದು ಕೃಷಿಗೋಷ್ಠಿಯಲ್ಲಿ ಅತಿಥಿಗಳೊಬ್ಬರು ನುಡಿದಂತೆ "ಇಂದು ರೈತ ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಬೆಳೆದು, ಸಾಲದಲ್ಲಿಯೇ ಸಾಯುತ್ತಿದ್ದಾನೆ". ಬಹಳ ಹಿಂದೆ ಪತ್ರಿಕೆಯಲ್ಲಿ ನೋಡಿದ ಒಂದು ವ್ಯಂಗ್ಯಚಿತ್ರದ ನೆನಪು: ಒಂದು ಕತ್ತೆ; ಅದರ ಮೇಲೆ ಒಬ್ಬ ಸವಾರ. ಆ ಸವಾರನ ಕೈಯಲ್ಲಿ ಒಂದು ಉದ್ದನೆಯ ಕೋಲು. ಅದರ ತುದಿಗೆ ಅವನು ಕಟ್ಟಿದ ಒಂದು ಹುಲ್ಲಿನ ಹೊರೆ. ಕತ್ತೆ ಹುಲ್ಲನ್ನು ತಿನ್ನುವ ಆಸೆಯಿಂದ ಓಡುತ್ತಿದೆ. ಸವಾರನು ಕತ್ತೆಗೆ ಹುಲ್ಲಿನ ಆಸೆ ತೋರಿಸಿ ಓಡಿಸುತ್ತಿದ್ದಾನೆ. ಆ ಕತ್ತೆ ಬೇರೆ ಯಾರೂ ಅಲ್ಲ. ನಮ್ಮ ನಾಡಿನ ಹಳ್ಳಿಯ ರೈತ. ಅವನಿಗೆ ಹುಲ್ಲಿನ ಆಸೆ ತೋರಿಸಿ ಓಡಿಸುತ್ತಿರುವವನೇ ಈ ದೇಶದ ಕೆಟ್ಟ ರಾಜಕಾರಣಿ. ಹಳ್ಳಿಯ ರೈತನ ಹೆಸರನ್ನು ಹೇಳಿಕೊಂಡು ಬಂದ ರಾಜಕಾರಣಿಗಳೆಲ್ಲಾ ಅವನು ಸತ್ತಾಗ ಪರಿಹಾರಧನ ಕೊಡುವ ಕೆಲಸಮಾಡುತ್ತಿದ್ದಾರೆಯೇ ವಿನಾ ಅವನು ಬದುಕಿದ್ದಾಗ ಅವನ ದುಡಿಮೆಗೆ ದಾರಿಮಾಡಿಕೊಟ್ಟು ಬದುಕಿಸುವ ಕೆಲಸ ಮಾಡುತ್ತಿಲ್ಲ. ತಾನು ಪಟ್ಟ ಬವಣೆಯನ್ನು ತನ್ನ ಮಕ್ಕಳು ಅನುಭವಿಸುವುದು ಬೇಡವೆಂದು ಹಳ್ಳಿಯ ರೈತ ತನ್ನ ಜಮೀನು ಮಾರಿಯಾದರೂ ಮಕ್ಕಳನ್ನು ಓದಿಸಲು ಬಯಸುತ್ತಾನೆ. ಮಕ್ಕಳಾದರೋ ಏನನ್ನು ಓದಲು ಬಯಸುತ್ತಾರೆ? ಕೈತುಂಬಾ ಹಣವನ್ನು ತಂದುಕೊಡುವ ಇಂಜಿನಿಯರಿಂಗ್, ಮೆಡಿಕಲ್ ಇತ್ಯಾದಿ ವೃತ್ತಿಶಿಕ್ಷಣವನ್ನು ಪಡೆಯಲು ಹಾತೊರೆಯುತ್ತಾರೆಯೇ ಹೊರತು ಭಾರತದ ಪ್ರಾಚೀನ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಯನ್ನು ಅಧ್ಯಯನ ಮಾಡಲು ಇಚ್ಛಿಸುವುದಿಲ್ಲ.

ಇಂಜಿನಿಯರಿಂಗ್ ಮತ್ತು ಮೆಡಿಕಲ್ ಪದವೀಧರರಂತೆ ಇತರೆ ಪದವಿಗಳನ್ನು ಪಡೆದವರು ಹೆಚ್ಚಿನ ಹಣ ಸಂಪಾದನೆಯನ್ನೇನೂ ನಿರೀಕ್ಷಿಸುವಂತಿಲ್ಲ. ಪ್ರಾಚೀನ ಸಾಹಿತ್ಯ, ಶಾಸ್ತ್ರ, ಸಂಗೀತ, ಕಲೆಗಳನ್ನು ಅಭ್ಯಾಸಮಾಡಿದವರಿಗೆ ಹೊಟ್ಟೆಯ ಪಾಡಿನದೇ ಚಿಂತೆಯಾಗಿರುವುದರಿಂದ ಅವರ ಕಲಿಕೆ ಮತ್ತು ಅಧ್ಯಯನ ಸೊರಗುತ್ತಿದೆ. ಒಳ್ಳೊಳ್ಳೆಯ ಹುದ್ದೆಗಳನ್ನು ಪಡೆದು ಹಣವನ್ನು ಗಳಿಸುವುದೇ ವಿದ್ಯಾಭ್ಯಾಸದ ಮೂಲಗುರಿಯಾಗಿರುವುದರಿಂದ ಈ ವಿಷಯಗಳನ್ನು ಓದಲು ಯಾರೂ ಮುಂದೆ ಬರುತ್ತಿಲ್ಲ:

**ಬುಭುಕ್ಷಿತೈರ್ವ್ಯಾಕರಣಂ ನ ಭುಜ್ಯತೇ**
**ಪಿಪಾಸಿತೈಃ ಕಾವ್ಯರಸೋ ನ ಪೀಯತೇ**
**ನಚ್ಛಂದಸಾ ಕೇನಚಿದಾರ್ಜಿತಂ ಫಲಂ**
**ಹಿರಣ್ಯಮೇವಾರ್ಜಯ ನಿಷ್ಫಲಾಃ ಕಲಾಃ**

**(ಹಸಿವಾದವನಿಗೆ ವ್ಯಾಕರಣವು ಉಣ್ಣಲು ಬಾರದು**
**ತೃಷೆಯುಳ್ಳವನಿಗೆ ಕಾವ್ಯರಸವು ಕುಡಿಯಲು ಬಾರದು**
**ಛಂದಸ್ಸಿನಿಂದ ಯಾರೂ ಹಣಗಳಿಸಲಾಗಿಲ್ಲ**
**ಕಲೆಗೆ ಫಲವಿಲ್ಲ, ಧನವನೆ ಗಳಿಸು ನಿನ್ನ ಕರ್ಮ!)**

ಎಂದು ಬಹಳ ಹಿಂದೆಯೇ ಸಂಸ್ಕೃತ ಕವಿಯೊಬ್ಬ ಮಾರ್ಮಿಕವಾಗಿ ನುಡಿದಿದ್ದಾನೆ. ಹಸಿವಾದವನಿಗೆ ವ್ಯಾಕರಣವು ಉಣ್ಣಲು ಬರುವುದಿಲ್ಲ. ಬಾಯಾರಿಸಿದವನಿಗೆ ಕಾವ್ಯರಸವು ಕುಡಿಯಲು ಬರುವುದಿಲ್ಲ. ಛಂದಸ್ ಶಾಸ್ತ್ರದಿಂದ ಯಾರೂ ಏನನ್ನೂ ಗಳಿಸಲಿಲ್ಲ. ಆದ್ದರಿಂದ ನೀನು ಹಣವನ್ನೇ ಗಳಿಸಲು ಮುಂದಾಗು, ಈ ಕಲೆಗಳಿಂದ ಏನೂ ಪ್ರಯೋಜನವಿಲ್ಲ. ಈ ಮಾತಿನ ಮಥಿತಾರ್ಥ ಹಣಸಂಪಾದನೆ ಮಾಡುವುದನ್ನು ಹೀಗಳೆಯುವುದಲ್ಲ. ಹಣವನ್ನೇ ತನ್ನ ಸಂಪಾದನೆಯ ಮೂಲ ಗುರಿಯನ್ನಾಗಿಸಿಕೊಂಡ ವ್ಯಕ್ತಿಗೆ ಶಾಸ್ತ್ರ, ಸಂಗೀತ, ಕಲೆ ಇತ್ಯಾದಿ ಸಿದ್ಧಿಸುವುದಿಲ್ಲ ಎಂದು ತಿಳಿಹೇಳುವುದಾಗಿದೆ. ಹಣಗಳಿಸುವುದನ್ನು ನಮ್ಮ ದಾರ್ಶನಿಕರು ಹೀಗಳೆದಿಲ್ಲ. ಅದನ್ನು ಜೀವನಮೌಲ್ಯಗಳಲ್ಲಿ ಒಂದು ಎಂದು ಪರಿಗಣಿಸಿದ್ದಾರೆ.

**ಅಜರಾಮರವತ್ ಪ್ರಾಜ್ಞೋ**
**ವಿದ್ಯಾಂ ಅರ್ಥಂ ಚ ಚಿಂತಯೇತ್**
**ಗೃಹೀತ ಇವ ಕೇಶೇಷು**
**ಮೃತ್ಯುನಾ ಧರ್ಮಮಾಚರೇತ್**

**(ಮುಪ್ಪಿಲ್ಲ, ಸಾವಿಲ್ಲವೆಂದು ಪರಿಭಾವಿಸಿ**
**ವಿದ್ಯೆ ಮತ್ತು ಹಣವನ್ನು ಸಂಪಾದಿಸು!**
**ಮೃತ್ಯು ನಿನ್ನ ತಲೆಗೂದಲ ಹಿಡಿದು**
**ಜಗ್ಗುತ್ತಿದೆಯೆಂದು ತಿಳಿದು**
**ಧರ್ಮಕಾರ್ಯವ ಮಾಡಲು ಮುಂದಾಗು!)**

ಎಂತಹ ಅದ್ಭುತವಾದ ಜೀವನದೃಷ್ಟಿ ಈ ಸಂಸ್ಕೃತ ಸೂಕ್ತಿಯಲ್ಲಿದೆ! ಜೀವನದ ಕೊನೆಯ ಉಸಿರಿನವರೆಗೂ ಮನುಷ್ಯ ವಿದ್ಯೆಯನ್ನು ಸಂಪಾದಿಸಬೇಕು. ತಾನು ಮುದುಕನಾಗಿದ್ದೇನೆ, ಸಾವು ಸಮೀಪಿಸುತ್ತಿದೆ, ಈಗ ವಿದ್ಯೆಯಿಂದ ತನಗೆ ಆಗಬೇಕಾದ್ದೇನಿದೆ ಎಂದು ನಿರ್ಲಕ್ಷಿಸಿ ವಿದ್ಯಾರ್ಜನೆಯನ್ನು ನಿಲ್ಲಿಸಕೂಡದು. ಅದೇ ರೀತಿ ಧನಾರ್ಜನೆಯನ್ನೂ ನಿಲ್ಲಿಸಬಾರದು. ತನಗೆ ವಯಸ್ಸಾಗಿದೆ, ಈ ಮುಪ್ಪಿನಲ್ಲಿ ಹಣವನ್ನು ಗಳಿಸಿ ಏನು ಮಾಡುವುದಿದೆ ಎಂದು ಹತಾಶನಾಗಿ ಹಣ ಗಳಿಸುವುದನ್ನು ಬಿಡಬೇಡ ಎಂಬುದು ಈ ಸೂಕ್ತಿಯ ತಾತ್ಪರ್ಯ.

'ವಿದ್ಯಯಾ ಅಮೃತಮಶ್ನುತೇ' ವಿದ್ಯೆಯಿಂದ ಅಮರತ್ವವು ಲಭಿಸುತ್ತದೆ ಎಂದು ಉಪನಿಷತ್ ಬೋಧಿಸುತ್ತದೆ. ಅಂತಹ ಅಮರತ್ವವನ್ನು ತಂದುಕೊಡುವ ವಿದ್ಯೆಯನ್ನು ಸಾಯುವ ಕೊನೆಯ ಗಳಿಗೆಯವರೆಗೂ ಗಳಿಸಬೇಕೆಂದು ಮೇಲ್ಕಂಡ ಸುಭಾಷಿತವು ಉಪದೇಶಿಸುತ್ತದೆ. ಜೀವನದುದ್ದಕ್ಕೂ ಗಳಿಸಬೇಕೆನ್ನುವ ವಿದ್ಯೆಯ ಜೊತೆಗೆ ಹಣವನ್ನೂ ಸೇರಿಸಿರುವುದು ಕೆಲವರಿಗೆ ಆಶ್ಚರ್ಯವನ್ನುಂಟು ಮಾಡಬಹುದು. ವಾರ್ಧಕ್ಯದ ಮತ್ತು ಸಾವಿನ ಪರಿವೆ ಇಲ್ಲದೆ ಹಣವನ್ನು ಗಳಿಸು ಎಂದು ಉಪದೇಶಿಸುವುದು ಹೊನ್ನು, ಹೆಣ್ಣು, ಮಣ್ಣುಗಳನ್ನು ಮಾಯೆಯೆಂದು ಹೀಗಳೆವ ಪಾರಲೌಕಿಕ ದೃಷ್ಟಿಗೆ ಅಪಥ್ಯವೆನಿಸಬಹುದು. ಹಾಗೆ ತಿಳಿಯಬೇಕಾಗಿಲ್ಲ. ಮಾಯೆ ಇರುವುದು ಭೋಗ್ಯ ವಸ್ತುವಿನಲ್ಲಲ್ಲ; ಆ ವಸ್ತುವನ್ನು ಸುಖಿಸಲು ಹಪಹಪಿಸುವ ಮನಸ್ಸಿನಲ್ಲಿ! ಅಲ್ಲಮ ಪ್ರಭುಗಳ ಮಾತಿನಲ್ಲಿ ಹೇಳುವುದಾದರೆ:

**ಹೆಣ್ಣು ಮಾಯೆ ಎಂಬರು, ಹೆಣ್ಣು ಮಾಯೆಯಲ್ಲ**
**ಹೊನ್ನು ಮಾಯೆ ಎಂಬರು, ಹೊನ್ನು ಮಾಯೆಯಲ್ಲ**
**ಮಣ್ಣು ಮಾಯೆ ಎಂಬರು, ಮಣ್ಣು ಮಾಯೆಯಲ್ಲ**
**ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರಾ!**

'ಸತ್ತವರು ಹಣವನ್ನು ಹೊತ್ತುಕೊಂಡು ಹೋಗುತ್ತಾರೆಯೇ?' ಎಂದು ವೈರಾಗ್ಯದ ಮಾತುಗಳನ್ನಾಡುವುದು ಹಣದ ಸಾರ್ಥಕ್ಯವನ್ನು ಅಲ್ಲಗಳೆಯುವುದಕ್ಕಲ್ಲ; ಹಣದ ಬಗ್ಗೆ ವ್ಯಕ್ತಿಯ ಮನಸ್ಸಿನಲ್ಲಿರುವ ದೃಷ್ಟಿಕೋನವನ್ನು ಬದಲಾಯಿಸುವುದಕ್ಕಾಗಿ. ಸಾಯುವ ಸಂದರ್ಭದಲ್ಲಿ 'ಹಣವನ್ನು ತೆಗೆದುಕೊಂಡು ಏನು ಮಾಡಲಿ' ಎಂದು ಉದ್ಗರಿಸುವ ಮಾತುಗಳಲ್ಲಿ ನೈಜವಾದ ವೈರಾಗ್ಯ ಭಾವನೆಗಿಂತ ತಾನು ಗಳಿಸಿ ಜತನದಿಂದ ಕೂಡಿಟ್ಟ ಹಣ ತನ್ನ ಉಪಯೋಗಕ್ಕೆ ಬಾರದೆ ಬೇರೆಯವರ ಪಾಲಾಗುತ್ತಿದೆಯಲ್ಲಾ ಎಂಬ ಸ್ವಾರ್ಥಪರತೆಯ ಹತಾಶಭಾವನೆ ನಿಹಿತವಾಗಿರುವುದು ಗೋಚರಿಸುತ್ತದೆ. 'ಧನವನಿರಿಸದಿರಾ, ಇರಿಸಿದರೆ ಭವ ಬಪ್ಪುದು ತಪ್ಪದು' ಎಂದು ಬಸವಣ್ಣನವರು ಹೇಳಿದ್ದು ಹಣವನ್ನು ತ್ಯಾಜ್ಯವಸ್ತುವನ್ನಾಗಿ ನೋಡುವುದಕ್ಕಲ್ಲ; ಹಣದ ಮೇಲಿನ ವ್ಯಾಮೋಹವನ್ನು ದೂರೀಕರಿಸುವುದಕ್ಕಾಗಿ. ಹಣ ಎಂದರೆ ಹೆಣವೂ ಬಾಯ್ತೆರೆಯುತ್ತದೆ ಎಂಬ ಗಾದೆ ಮಾತು ಬಂದುದು ಅದರ ಮೇಲಿನ ಈ ವ್ಯಾಮೋಹದ ಕಾರಣಕ್ಕಾಗಿ. ವ್ಯಕ್ತಿಯು ತಾನು ಗಳಿಸಿದ ಹಣ ತನ್ನ ವೈಯಕ್ತಿಕ ಸುಖಕ್ಕೆ ಉಪಯೋಗವಾದಾಗ ಮಾತ್ರ ತಾನು ಗಳಿಸಿದ್ದಕ್ಕೂ ಸಾರ್ಥಕವಾಯಿತು ಎಂದು ತಿಳಿಯುವ ಸ್ವಾರ್ಥ ಭಾವನೆಯನ್ನು ಬಿಟ್ಟು, ಇತರೆಯವರ ಸಂಕಷ್ಟವನ್ನು ಪರಿಹರಿಸಲು ತನ್ನ ಗಳಿಕೆಯನ್ನು ಸದ್ವಿನಿಯೋಗ ಮಾಡಿ ಅವರ ಸುಖದಲ್ಲಿ ತನ್ನ ಸುಖವನ್ನು ಕಾಣುವುದರಿಂದ ಜೀವನದ ಸಾರ್ಥಕ್ಯವನ್ನು ಕಾಣಬಹುದಾಗಿದೆ. ಅದಕ್ಕಾಗಿಯೇ ಈ ಸುಭಾಷಿತದ ಕೊನೆಯ ಸಾಲುಗಳಲ್ಲಿ ಹೇಳಿರುವುದು: 'ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್'. ಧರ್ಮದ ವಿಷಯ ಬಂದಾಗ ನಾಳೆ ನಾಳೆ ಎಂದು ಮುಂದಕ್ಕೆ ಹಾಕದೆ ನಾಳೆಯವರೆಗೂ ಬದುಕಿರಲು ಮೃತ್ಯುದೇವತೆ ಬಿಡುತ್ತದೆಯೋ ಇಲ್ಲವೋ ಎಂದು ಪರಿಭಾವಿಸಿ ಈ ದಿನವೇ ಈ ಕ್ಷಣವೇ ಧರ್ಮಕಾರ್ಯಗಳನ್ನು ಮಾಡಿಬಿಡುವುದು ಒಳ್ಳೆಯದು. ನಾಳೆಯವರೆಗೂ ಮುಂದಕ್ಕೆ ಹಾಕಿ ದುರದೃಷ್ಟವಶಾತ್ ಬದುಕಿಲ್ಲದೇ ಹೋದರೆ ಒಂದು ಪುಣ್ಯಕಾರ್ಯವನ್ನು ಮಾಡುವ ಸದವಕಾಶದಿಂದ ವಂಚಿತನಾಗುತ್ತೀಯಾ ಎಂಬುದು ಸುಭಾಷಿತದ ಸದಾಶಯ.

ಈ ಸುಭಾಷಿತದಲ್ಲಿ ಬಳಸಿರುವ 'ಧರ್ಮ' ಎನ್ನುವ ಪದಕ್ಕೆ ನಾನಾ ಅರ್ಥ ಇವೆ. 'ನೀವು ಯಾವ ಧರ್ಮಕ್ಕೆ ಸೇರಿದವರು' ಎಂದು ಕೇಳುವಾಗ 'ಮತಧರ್ಮ' ಎಂಬ ಅರ್ಥ. 'ನೀನು ಏನೇ ಹೇಳು ಇದು ನಿನ್ನ ಧರ್ಮ ಅಲ್ಲ' ಎನ್ನುವಾಗ 'ನ್ಯಾಯ' ಎಂದು ಅರ್ಥ. 'ಸುಡುವುದು ಬೆಂಕಿಯ ಧರ್ಮ' ಎನ್ನುವಾಗ ಬೆಂಕಿಯಲ್ಲಿ ನಿಹಿತವಾಗಿರುವ ಸುಡುವ 'ಗುಣ'. 'ಧರ್ಮ ಮಾಡಿ ತಂದೇ' ಎಂದು ಒಬ್ಬ ಭಿಕ್ಷುಕ ದೈನ್ಯತೆಯಿಂದ ಬೇಡುವಾಗ 'ದಾನ' ಎಂಬ ಅರ್ಥ. 'ವೃದ್ಧಾಪ್ಯದಲ್ಲಿ ತಂದೆತಾಯಿಗಳನ್ನು ನೋಡಿಕೊಳ್ಳುವುದು ಮಕ್ಕಳ ಧರ್ಮ' ಎನ್ನುವಾಗ 'ಕರ್ತವ್ಯ' ಎಂಬ ಅರ್ಥ. ಹೀಗೆ ದೈನಂದಿನ ವ್ಯವಹಾರಗಳಲ್ಲಿ ನಾನಾ ಅರ್ಥದಲ್ಲಿ 'ಧರ್ಮ' ಎಂಬ ಪದವು ಬಳಕೆಯಲ್ಲಿರುವುದನ್ನು ನೋಡುತ್ತೇವೆ. 'ದಯವೇ ಧರ್ಮದ ಮೂಲವಯ್ಯಾ' ಎಂದು ಹೇಳುವಾಗ ಬಸವಣ್ಣನವರು ಧರ್ಮವನ್ನು ಒಂದು ಮಾನವೀಯ ಮೌಲ್ಯವನ್ನಾಗಿ ಗುರುತಿಸಿದ್ದಾರೆ. ಕಷ್ಟದಲ್ಲಿರುವವರನ್ನು ಕಂಡು ಮರುಗುವುದೇ ಮಾನವ ಧರ್ಮ. ಆದರೆ ಇಂದಿನ ದಿನಮಾನಗಳಲ್ಲಿ ಒಬ್ಬರನ್ನು ಕಂಡು ಒಬ್ಬರು ಕರುಬುವುದೇ ಮಾ(ದಾ)ನವ ಧರ್ಮವಾಗಿದೆ.

ವಿದ್ಯೆ ಒಂದು ಕಾಲಾವಧಿಯಲ್ಲಿ ಕಲಿತು ಪೂರೈಸಿ ಕೈತೊಳೆದು ಕುಳಿತುಕೊಳ್ಳುವುದಲ್ಲ, ಜೀವನದುದ್ದಕ್ಕೂ ಕಲಿಯಬೇಕಾದುದು ಬಹಳಷ್ಟಿದೆ. ನಿನ್ನೆಯ ವಿದ್ಯಾವಂತ ಇಂದು ಕಲಿಯದೇ ಹೋದರೆ ನಾಳೆ ಅವಿದ್ಯಾವಂತನೆನಿಸಿಕೊಳ್ಳುತ್ತಾನೆ ಎಂಬ ಮಾತೊಂದು ಆಂಗ್ಲಭಾಷೆಯಲ್ಲಿದೆ (An educated man of yesterday who stops learning today becomes uneducated tomorrow!) ವಿದ್ಯೆಯಿಂದ ಮನುಷ್ಯನ ವ್ಯಕ್ತಿತ್ವದ ವಿಕಾಸವಾಗುತ್ತದೆ, ವಿಕೃತಗೊಳ್ಳುವುದಿಲ್ಲ. ಒಂದು ಪಕ್ಷ ವಿಕೃತಗೊಂಡರೆ, ಅವನು ಪಡೆದದ್ದು ಸದ್ವಿದ್ಯೆಯಲ್ಲ, ದುರ್ವಿದ್ಯೆ. ಇಂದಿನ ವಿದ್ಯೆ ಸಮಾಜದಲ್ಲಿ 'ದುಬಾರಿ ಬೆಲೆಯ' ಗಂಡುಗಳನ್ನು (prospective bridegrooms) ತಯಾರುಮಾಡುತ್ತಿದೆ. ನಿಜವಾದ ವಿದ್ಯೆಯ ಸ್ವರೂಪವೇ ಬೇರೆ.

**ವಿದ್ಯಾ ದದಾತಿ ವಿನಯಂ**
**ವಿನಯಾದ್ ಯಾತಿ ಪಾತ್ರತಾಂ**
**ಪಾತ್ರತ್ವಾದ್ ಧನಮಾಪ್ನೋತಿ**
**ಧನಾದ್ ಧರ್ಮಂ, ತತಃ ಸುಖಂ**

"ವಿದ್ಯೆಯು ವಿನಯವನ್ನು ತಂದು ಕೊಡುತ್ತದೆ. ವಿನಯದಿಂದ ವ್ಯಕ್ತಿಯ ಯೋಗ್ಯತೆಯು ರೂಪುಗೊಳ್ಳುತ್ತದೆ. ಯೋಗ್ಯತೆಯಿಂದ ಹಣವನ್ನು ಪಡೆಯುತ್ತಾನೆ. ಹಣದಿಂದ ಧರ್ಮಕಾರ್ಯ ಮಾಡುತ್ತಾನೆ. ಧರ್ಮಕಾರ್ಯದಿಂದ ಸುಖವನ್ನು ಪಡೆಯುತ್ತಾನೆ" ಎಂದು ಈ ಸಂಸ್ಕೃತ ಸೂಕ್ತಿಯು ಹೇಳುತ್ತದೆ. ಆದರೆ ಈಗಿನ ವಿದ್ಯೆಯು ವಿನಯವನ್ನು ತಂದುಕೊಡುತ್ತಿಲ್ಲ. ಪ್ರತಿಯಾಗಿ ಅಹಂಕಾರವನ್ನು ತಂದುಕೊಡುತ್ತಿದೆ. ಸಮಾಜದಲ್ಲಿ ವಿದ್ಯಾವಂತರೆಂಬ ಪೊಳ್ಳು ಪ್ರತಿಷ್ಠೆಗಳನ್ನು ಬೆಳೆಸುತ್ತಿದೆ. ಹಳ್ಳಿಗಳಲ್ಲಿ ನಾವು ನೋಡಿದಂತೆ ಪೇಟೆಗೆ ಓದಲು ಹೋಗುವ ಮಕ್ಕಳಿಗೆ ತಾಯಂದಿರು ರುಚಿರುಚಿಯಾದ ತಿಂಡಿ ತಿನಿಸುಗಳನ್ನು ಮಾಡಿಕೊಡುತ್ತಾರೆ. ಅದೇ ಓದುವುದನ್ನು ಬಿಟ್ಟು ಬೇಸಾಯ ಹೊಡೆಯಲು ಹೊಲಕ್ಕೆ ಹೋಗುವ ಮಕ್ಕಳಿಗೆ ಒಣ ರೊಟ್ಟಿ ಮುದ್ದೆ! ಇದೆಂತಹ ತಾಯ್ತನ! ಇದೆಂತಹ ಮಮತೆ! ಸ್ವಂತ ಮಕ್ಕಳಲ್ಲೇ ಭೇದ-ಭಾವ ಮಾಡುವ ತಾಯಂದಿರ ಈ ಪ್ರವೃತ್ತಿಗೆ ಏನೆನ್ನಬೇಕೋ ತಿಳಿಯದು. ಇಂದು ನಮ್ಮ ನಾಡಿಗೆ ಬೇಕಾಗಿರುವುದು ವಿದ್ಯಾವಂತರಿಗಿಂತ ನೀತಿವಂತರು. ಇಂದು ಓದಿಗೂ ನೀತಿಗೂ ಸಂಬಂಧವೇ ಇಲ್ಲದಂತಾಗಿದೆ.

ತಾನು ಎಷ್ಟೇ ಓದಿದ್ದರೂ, ತಿಳಿದಿದ್ದರೂ ಯಾವಾತನು ತಾನು ಅಲ್ಪಜ್ಞನೆಂದು ಪರಿಭಾವಿಸುತ್ತಾನೋ ಅವನ ಜ್ಞಾನದ ಪರಿಧಿಯು ವಿಸ್ತರಿಸುತ್ತಾ ಹೋಗುತ್ತದೆ. ಎಲ್ಲವನ್ನೂ ತಿಳಿದಿರುವುದಾಗಿ ಯಾರು ಅಹಂಕಾರದಿಂದ ಬೀಗುತ್ತಾರೋ ಆ ವ್ಯಕ್ತಿಯ ಬುದ್ಧಿಯು ಬೆಳೆಯುವುದಿಲ್ಲ. ಈಗಿನ ಕಾಲದಲ್ಲಿ ಒಳ್ಳೆಯ ವಿದ್ಯಾಭ್ಯಾಸ ಮಾಡಿ ಯೋಗ್ಯರೆನಿಕೊಂಡವರೆಲ್ಲರೂ ಹೇರಳವಾಗಿ ಹಣವನ್ನು ಸಂಪಾದಿಸುತ್ತಾರೆಂದು ಹೇಳುವುದು ಕಷ್ಟ (ಪಾತ್ರತ್ವಾದ್ ಧನಮಾಪ್ನೋತಿ). ಯೋಗ್ಯರಿಗಿಂತ ಅಯೋಗ್ಯರೇ ಹೆಚ್ಚು ಹಣವನ್ನು ಗಳಿಸುವುದು ಎಲ್ಲರ ಅನುಭವಕ್ಕೆ ಬಂದ ವಿಚಾರ. ಅದೇ ರೀತಿ ಹಣ ಸಿಕ್ಕ ತಕ್ಷಣ ಧರ್ಮಕಾರ್ಯ ಮಾಡಲು ಮನಸ್ಸು ಮಾಡುತ್ತಾರೆಂದು ನಿರೀಕ್ಷಿಸುವಂತೆಯೂ ಇಲ್ಲ (ಧನಾದ್ ಧರ್ಮಂ). ಹೆಚ್ಚು ಹೆಚ್ಚು ಹಣ ಸಂಪಾದಿಸಿದಂತೆ ವೈಯಕ್ತಿಕ ಆಶೆ ಆಕಾಂಕ್ಷೆಗಳ ಈಡೇರಿಕೆಗೆ ಹಣದ ಅವಶ್ಯಕತೆ ಹೆಚ್ಚುತ್ತಾ ಹೋಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಮನಸ್ಸಿನ ಈ ಹಿಂಗದ ತೃಷೆಯನ್ನು ಕಂಡೇ ಉಪನಿಷತ್ಕಾರರು ಹೇಳಿದ್ದು: 'ನ ವಿತ್ತೇನ ತರ್ಪಣೀಯೋ ಮನುಷ್ಯಃ' (ಮನುಷ್ಯನನ್ನು ಹಣದಿಂದ ತೃಪ್ತಿಪಡಿಸಲು ಸಾಧ್ಯವಿಲ್ಲ). ಹೀಗಾಗಿ ಎಷ್ಟೇ ಹಣವನ್ನು ಸಂಪಾದಿಸಿದರೂ ಸುಖವು ಅಂಥವರ ಪಾಲಿಗೆ ಮೃಗಮರೀಚಿಕೆಯಾಗಿಯೇ ಉಳಿಯುತ್ತದೆ. ಜೀವನನಿರ್ವಹಣೆಗೆ ಹಣ ಬೇಕು. ಆದರೆ ಹಣ ಒಂದೇ ಮನುಷ್ಯನಿಗೆ ಸುಖವನ್ನು ತಂದುಕೊಡುವುದಿಲ್ಲ. ಮೆತ್ತನೆಯ ಹಾಸಿಗೆ ಇದ್ದ ಮಾತ್ರಕ್ಕೆ ನಿದ್ರೆ ಬರುವುದಿಲ್ಲ. ನಿದ್ರೆಗುಳಿಗೆ ಬೇಕೇ ಬೇಕು. ಅಪ್ಪಿತಪ್ಪಿ ಹೆಚ್ಚಿನ ಗುಳಿಗೆ ಸೇವಿಸಿದರೆ ಚಿರನಿದ್ರೆ! ಒಂದು ದಿನದ ರಜಾಘೋಷಣೆ. 'ನಾಡಿಗೆ ತುಂಬಲಾರದ ನಷ್ಟ' ಆಗುತ್ತದೆಯೋ ಇಲ್ಲವೋ, ಶಾಲಾ ಮಕ್ಕಳಿಗಂತೂ ಒಂದು ದಿನದ ಪಾಠ ನಷ್ಟ! ಏಕೆ ಬೇಗನೆ ಶಾಲೆಯಿಂದ ಬಂದೆ ಎಂದು ಕೇಳಿದರೆ ಮಗು ಕೊಡುವ ಉತ್ತರ: 'ಇವತ್ತು ಯಾರೋ ಸತ್ತಿದ್ದಾರಂತೆ!'

3.2.2010

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑